ಶಾಂತ ಗೌಡ, ಬೆಂಗಳೂರು
ಜೈಲಿಗೆ ಹೋಗಿ ಬಂದವರಿಗೆ ಅದ್ದೂರಿ ಸ್ವಾಗತ ಕೋರುವ ಒಳಮರ್ಮವೇನು ಗುರುವೆ?



ಗ್ಯಾಂಗ್ ಲೀಡರನ್ನು ಐಟಂ ಸಾಂಗ್ ಸಮೇತ ಗುರಿ ಮಾಡಿಕೊಳ್ಳುವುದು ನಮ್ಮ (ವಿ)ಚಿತ್ರ ಸಂಪ್ರದಾಯ.

ರಾಘವೇಂದ್ರ ಪಿ.ಜೆ. ಮೈಸೂರು
ಅನರ್ಹ ಶಾಸಕರು ರೂಪಿಸಿದ್ದ ಶಾಸನಗಳೂ ಅನರ್ಹಗೊಳ್ಳುವವೇ?
ಅನರ್ಹ ಶಾಸಕರು ಗಾಯ; ಶಾಸನ ಕಲೆ. ಗಾಯ ಹೋದರೂ ಕಲೆ ಉಳಿಯುತ್ತದೆ.

ಪಿ. ಜಯವಂತ ಪೈ, ಕುಂದಾಪುರ
ಕಟಕಟೆಯಲ್ಲಿ ನಿಂತ ಅಪರಾಧಿ, ನಿರಪರಾಧಿ, ಇಬ್ಬರೂ 'ಸತ್ಯವನ್ನೇ ಹೇಳುತ್ತೇನೆ' ಅಂತಾರಲ್ಲಾ?
'ಇಂದು ಈಗ ಇಲ್ಲಿ' ಎಂದೇನೂ ಸೇರಿಸಿರಲ್ಲವಲ್ಲ; ಎಲ್ಲೋ, ಯಾರ ಬಳಿಯೋ ಸತ್ಯ ಹೇಳಿರುತ್ತಾರೆ.

ದಿನೇಶ್, ಗುಡ್ಡದೂರು
'ಉಂಡೂ ಹೋದ, ಕೊಂಡೂ ಹೋದ' ಎನ್ನುವುದು ರಾಜಕೀಯದವರಿಗೆ, ಸ್ವಾಮೀಜಿಗಳಿಗೆ ಅನ್ವಯಿಸುತ್ತಾ?



ಸ್ವಲ್ಪ ಚೇಂಜ್ ಮಾಡಿ 'ಲ್ಯಾಂಡೂ ಹೊಡೆದ, ಫಂಡೂ ಹೊಡೆದ' ಎಂದರೆ ಸರಿಯಾದೀತು.

ವಿ. ಹಮೀದ್, ವಿಟ್ಲ
ಗೃಹಸ್ಥನಿಗೂ, ಬ್ರಹ್ಮಚಾರಿಗೂ ಇರುವ ವ್ಯತ್ಯಾಸವೇನು ಸಾರ್?
ಗೃಹಸ್ಥ ಜೀವನನೌಕೆಯ ಹಾಯಿ; ಬ್ರಹ್ಮಚಾರಿ ಗಾಳಿಪಟ.

ರಮೇಶ್ ಬೊಂಗಾಳೆ, ಬೈಲಹೊಂಗಲ
ಯಾರಿಗೂ ನೋವು ಮಾಡದ ವ್ಯಕ್ತಿ ಯಾರು?
ಕ್ಲೋರೋಫಾರ್ಮನ್ನು ಹತ್ತಿಯಲ್ಲಿ ಅದ್ದಿ ಮೂಗಿಗೆ ಹಿಡಿಯುವ ಅನಸ್ತೆಟಿಸ್ಟ್.

ಸಿ. ಆನಂದಪ್ಪ, ಬೆಂಗಳೂರು
ಕ್ರಿಕೆಟಿಗ ಸೆಹ್ವಾಗ್ ಮೃತಯೋಧರ ಪುತ್ರರನ್ನು ದತ್ತು ಪಡೆದದ್ದಕ್ಕೂ, ಸರ್ಕಾರದ ಅನ್ನಭಾಗ್ಯ, ಕ್ಷೀರಭಾಗ್ಯಕ್ಕೂ ಏನು ವ್ಯತ್ಯಾಸ?
ಅದು ಮೆಚ್ಚತಕ್ಕ ರಕ್ಷೆ; ಇದು ಶುದ್ಧ ಭಿಕ್ಷೆ.

ನಾಜ್ಯೋತಿ, ಹೂವಿನಹಡಗಲಿ
ಯಾವಾಗಲೂ ಹೊಟ್ಟೆ ತುಂಬಿರುವ ವ್ಯಕ್ತಿ ಯಾರು?



ಗರ್ಭಿಣಿ.

ಎಂ.ಎ. ಕುಮಾರ್, ಬೆಂಗಳೂರು
ಆಸ್ಪತ್ರೆಯ ಸಮೀಪದ ಮನೆಗಳಿಗೂ, ಸ್ಮಶಾನದ ಸಮೀಪದ ಮನೆಗಳಿಗೂ ವ್ಯತ್ಯಾಸವೇನು?
ಅವರು ಆ ಆಸ್ಪತ್ರೆಯನ್ನು ಇತರರಿಗೆ ಶಿಫಾರಸು ಮಾಡಬಹುದು. ಇವರು....

ರತ್ನಾ ರಾಜ್‌ಕುಮಾರ್, ಹಾಸನ
'ಹವಾಮಾನ ವರದಿ'ಯನ್ನು ನನ್ನ ಮಗಳು 'ಅವಮಾನ ವರದಿ' ಎಂದೇ ಓದುತ್ತಾಳಲ್ಲಾ...?
ವೆರಿ ಗುಡ್. ಮುಂದೆ ಅನೌನ್ಸರ್ ಅಥವಾ ಸ್ಕ್ರಾಲ್ ರೈಟರ್ ಕೆಲಸ ಖಾತ್ರಿ.

ರತ್ನಾ ಅಶೋಕ ಗೊರವರ, ಧಾರವಾಡ
ದೇವರು ನಿಮ್ಮೆದುರಿಗೆ ಬಂದು ನಿಂತರೆ ಏನು ಕೇಳುತ್ತೀರಿ?
'ಯಾವ ಅಡ್ರೆಸ್ ಬೇಕಾಗಿತ್ತು?' ಎನ್ನುತ್ತೇನೆ. ನನಗೆ ಅವನಲ್ಲಿ, ಅವನಿಗೆ ನನ್ನಲ್ಲಿ ಕೆಲಸವಿಲ್ಲ.

ಗುರು, ಕೋಟೇಶ್ವರ
ಸತಿ ಸಂಸಾರದ ಜ್ಯೋತಿ. ಪತಿ?
ಬತ್ತಿ.

## ಬಹುಮಾನಿತ ಪ್ರಶ್ನೆ

ಈರಣ್ಣ ಐ. ದವಡಿ, ಹಳ್ಳದಕೇರಿ
ಕ್ಯಾಂಡಲ್ ಹಚ್ಚಿದರೆ ಜನ್ಮದಿನ. ಹಣತೆ ಹಚ್ಚಿದರೆ ಮರಣದಿನ. ನಡುವಿನ ಅವಧಿಯಲ್ಲಿ ಏನು ಹಚ್ಚಬೇಕು?
ಬೆಣ್ಣೆ, ಟೊಮೆಟೊ/ಚಿಲ್ಲಿ ಸಾಸ್, ಪೌಡರ್, ಸ್ನೋ, ಅಮೃತಾಂಜನ, ನೋವಿನೆಣ್ಣೆ, ಹುಡುಗಿಯರಿಗೆ ಲೈನ್...

ಬಿ. ಚಂದ್ರೇಗೌಡ, ಬೆಂಗಳೂರು
ಗ್ರಾಮರ್‌ಗೂ, ಗ್ಲಾಮರ್‌ಗೂ ಏನು ವ್ಯತ್ಯಾಸ?
ಗ್ರಾಮರ್‌ನಲ್ಲಿ ನುಡಿಗೆ ಆದ್ಯತೆ; ಗ್ಲಾಮರ್‌ನಲ್ಲಿ ನಡು, ನಡೆ, ನಗೆಗೆ ಆದ್ಯತೆ.

ಮಹಾವೀರ ಕಾಸರ, ಶಿವಮೊಗ್ಗ
ಅವಿವಾಹಿತ ಮತ್ತು ಬ್ರಹ್ಮಚಾರಿಗೆ ಇರುವ ವ್ಯತ್ಯಾಸವೇನು?
ಬ್ರಹ್ಮಚಾರಿ 'ಸಾಧು' ಪ್ರಾಣಿ; ಅವಿವಾಹಿತ ದೀಹದ ಪ್ರಾಣಿ.

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
ಮನುಷ್ಯ ನೆಮ್ಮದಿಯಿಂದ ಇರಬೇಕಾದರೆ ಏನು ಮಾಡಬೇಕು?
'ನೆನ್ನೆ ನೆನ್ನೆಗೆ ಇಂದು ಇಂದಿಗೆ ಇರಲಿ ನಾಳೆಯು ನಾಳೆಗೆ' ಎನ್ನುವುದನ್ನು ಅನುಷ್ಠಾನಕ್ಕೆ ತರಬೇಕು.

ಎನ್.ವಿ. ಶ್ರೀನಿವಾಸ್, ಮೈಸೂರು
ನಾಯಿಗಳ ಬಾಲ ನೆಟ್ಟಗಿದ್ದಿದ್ದರೆ ಏನಾಗುತ್ತಿತ್ತು?



ಕರ್ಚೀಫಿನಂತಹ ಸಣ್ಣ ವಸ್ತುಗಳನ್ನು ಅದರ ಮೇಲೆ ಒಣಗಹಾಕಬಹುದಾಗಿತ್ತು.

ಗಂಜಾಂ ನಾಗರಾಜ, ಮೈಸೂರು
ದುರ್ಯೋಧನ ತನ್ನ ಪಕ್ಷಕ್ಕೆ ಶ್ರೀಕೃಷ್ಣನನ್ನು ಆರಿಸಿಕೊಂಡಿದ್ದರೆ ಕುರುಕ್ಷೇತ್ರ ಯುದ್ಧವನ್ನು ಯಾರು ಗೆಲ್ಲುತ್ತಿದ್ದರು?
ಪಾಂಡವರೇ; ಭೀಷ್ಮ, ಅಶ್ವತ್ಥಾಮರಂತೆ ಕೃಷ್ಣನೂ ಕಾರಣಾಂತರಗಳಿಂದ ಅರ್ಧದಲ್ಲಿ ಹೊರಹೋಗುತ್ತಿದ್ದ.

■ ರಾಮ್